# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 1137 /2024

**ಸಾಕ್ಷಿಯನ್ನು ದಿಃ 20.08.2025 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ. PKR ವಕೀಲರಿಂದಃ**

ಆರೋಪಿಯ ಗಂಡನ ಹೆಸರು ಮಹದೇವ ಆಗಿದೆ. ಆರೋಪಿ ನಮ್ಮ ಬೀದಿಯಲ್ಲಿಯೇ ವಾಸವಿದ್ದಾರೆ. ಒಂದೇ ಬೀದಿಯಲ್ಲಿ ನಮ್ಮ ಮನೆ ಇದೆ. ಆರೋಪಿಯ ಗಂಡ ತರಕಾರಿ, ಮೀನು ಮತ್ತು ಇತರೆ ವ್ಯಾಪಾರ ಮಾಡುತ್ತಾರೆ. ಹಿಗ್ಗೆ 2 ವರ್ಷದ ಹಿಂದೆ ಆರೋಪಿಯ ಗಂಡ ಏನು ಮಾಡುತ್ತಿದ್ದರು ಎಂದರೆ 2-3 ರೀತಿಯ ವ್ಯಾಪಾರ ಮಾಡುತ್ತಿದ್ದರು ನಿಖರವಾಗಿ ಗೊತ್ತಿಲ್ಲ. ಆರೋಪಿ ಏನು ಕೆಲಸ ಮಾಡುತ್ತಾರೆ ಎಂದು ಗೊತ್ತಿಲ್ಲ. ನಾನು ಚೆಕ್ ಗೆ ಸಂಬಂಧಿಸಿದಂತೆ ಇದೇ ಮೊದಲ ಪ್ರಕರಣ ದಾಖಲಿಸಿದ್ದೇನೆ. ನನ್ನ ಬಳಿ ಬೇರೆ ಯಾರ ಚೆಕ್ ಇಲ್ಲ. ನಾನು ಮತ್ತು ನನ್ನ ತಾಯಿ ಚೀಟಿ ನಡೆಸುತ್ತೇವೆ ಎಂದರೆ ಇಲ್ಲ. ಆರೋಪಿ 2024ರ 7ನೇ ತಿಂಗಳಲ್ಲಿ ಸಾಲ ಬೇಕು ಎಂದು ಕೇಳಿದ್ದರು. ಆಗ ನಾನು ಮತ್ತು ಆರೋಪಿ ಮಾತ್ರ ಇದ್ದೆವು. ನಿಖರವಾಗಿ ಯಾವ ದಿನಾಂಕದಂದು ಸಾಲ ಕೇಳಿದ್ದಾರೆ ಎಂದು ಹೇಳಲು ಆಗುವುದಿಲ್ಲ. ದಿಃ 21.07.2024 ರಂದು ನಾನು ಆರೋಪಿ ಸಾಲ ಕೊಟ್ಟೆ. ಸಾಲ ಕೊಟ್ಟ ಬಗ್ಗೆ ದಾಖಲೆ ಏನು ಇದೆ ಎಂದರೆ ವಿಶ್ವಾಸದ ಮೇಲೆ ಸಾಲ ಕೊಟ್ಟಿದ್ದೇನೆ. ಸಾಲ ಕೊಟ್ಟ ಬಗ್ಗೆ ದಾಖಲೆ ಮಾಡಿಕೊಳ್ಳಲಿಲ್ಲ. ನಾನು ಹಣವನ್ನು ನನ್ನ ಮನೆಯಲ್ಲಿಯೇ ಕೊಟ್ಟಿದ್ದೇನೆ. ಆಗ ಬೇರೆ ಯಾರು ಇರಲಿಲ್ಲ. ಆರೋಪಿ ಒಬ್ಬರೇ ಹಣ ಪಡೆದುಕೊಳ್ಳಲು ಬಂದಿದ್ದರು. ಹಣ ಕೊಟ್ಟ ದಿನವೇ ಏನಾದರೂ ದಾಖಲೆ ಮಾಡಿಕೊಳ್ಳಲು ತೊಂದರೆ ಇತ್ತೇ ಎಂದರೆ ಪ್ರೀತಿ ವಿಶ್ವಾಸದ ಮೇಲೆ ಹಣ ಕೊಟ್ಟಿದ್ದರಿಂದ ದಾಖಲೆ ಮಾಡಿಲ್ಲ.

3 ತಿಂಗಳ ನಂತರ ನಾನು ಹಣ ವಾಪಸ್ಸು ಕೊಡುವಂತೆ ಆರೋಪಿಯ ಮನೆಯ ಬಳಿ ಹೋಗಿ ಕೇಳಿದಾಗ ಆರೋಪಿ ಚೆಕ್ಕನ್ನು ಕೊಟ್ಟರು. ಆಗ ಆರೋಪಿಯ ಮನೆಯಲ್ಲಿ ಬೇರೆ ಯಾರು ಇರಲಿಲ್ಲ. ಮನೆಯ ಒಳಗೆ ಬೇರೆ ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ. ನಾನು ಹಣ ಕೇಳಿದಾಗ ಆರೋಪಿ ಹಣ ಕೈಯಲ್ಲಿ ಇಲ್ಲ. ಬ್ಯಾಂಕ್ ನಲ್ಲಿ ಇದೆ ಎಂದು ಹೇಳಿ ಚೆಕ್ಕನ್ನು ಕೊಟ್ಟರು.

ಸಾಕ್ಷಿಗೆ ನಿಪಿ–1ರ ಚೆಕ್ ಮತ್ತು ಅದನ್ನು ಹಾಜರುಪಡಿಸಿದ ಬಗ್ಗೆ ವಕೀಲರು ಸಲ್ಲಿಸಿದ ಮೆಮೊವನ್ನು ತೋರಿಸಿ 2ರಲ್ಲಿರುವ ಕೈಬರಹಗಳು ಒಂದೇ ಆಗಿದೆ ಎಂದರೆ ಸರಿಯಲ್ಲ. ನಿಪಿ–1ರ ಚೆಕ್ ಮತ್ತು ಅದನ್ನು ಹಾಜರುಪಡಿಸಿದ ಮೆಮೊವನ್ನು ತಜ್ಞರ ಅಭಿಪ್ರಾಯಕ್ಕೆ ಸಲ್ಲಿಸಲು ನನ್ನ ತಕರಾರು ಇಲ್ಲ.

(**ಮುಂದುವರಿದ ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದು**, **ಕೋರಿಕೆ ಮೇರೆಗೆ ಮುಂದೂಡಲಾಯಿತು**.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.